

ಘಂಟೆ ಹೊಡೆಯಿತು. ಶಾಲೆಯ ಕೊಠಡಿಗಳಿಂದ ಮಕ್ಕಳು ಕೇಕೆ ಹಾಕುತ್ತ ಹೊರಗೆ ಓಡಿ ಬಂದರು. ಎಲ್ಲರಿಗೂ ಮನೆಗೆ ಹೋಗುವ ಆತುರ. ಎಲ್ಲರದ್ದೂ ಒಂದು ದಾರಿಯಾದರೆ ಅಜಿತನದೇ ಒಂದು ದಾರಿ. ಅವನು ಸಂದಿ ಗೊಂದಿ ನುಸುಳಿ ಅಂತೂ ಹೇಗೋ ತಾನೇ ಬೇಗ ಮನೆಗೆ ಸೇರುತ್ತಾನೆ. ಅಂದು ಅವನು ಹೋಗುವ ದಾರಿಯಲ್ಲಿ ಒಂದು ಮಾವಿನ ತೋಪು ಸಿಕ್ಕಿತು. ಮರದ ತುಂಬ ಹಣ್ಣುಗಳು ತೂಗುತ್ತಿದ್ದವು. ಹೆಚ್ಚಿನ ಪಾಲು ಹಣ್ಣುಗಳು ಆಗಲೇ ಕೆಂಪು ಬಣ್ಣಕ್ಕೆ ತಿರುಗಿದ್ದವು. ಅಲ್ಲಲ್ಲಿ ಗಿಣಿಗಳು ಕೊಕ್ಕಿನಿಂದ ಕುಕ್ಕಿ ತಿನ್ನುತ್ತಿದ್ದವು. ಕೊಕ್ಕಿನ ಕೆಂಪು ಬಣ್ಣ ಹಣ್ಣಿನ ಕೆಂಪು ಬಣ್ಣದಲ್ಲಿ ಸೇರಿಹೋಗಿತ್ತು. ಗಿಣಿ ಕಚ್ಚಿದ ಹಣ್ಣು ಬಹಳ ರುಚಿ.